programme of such works depends on the result of this experiment.

Sri ALUR HANUMANTHAPPA.—What is the scheme adopted by Government regarding desilting of minor tanks? Is there any Expert Body constituted by the Government of India with regard to desilting of tanks?

†**Sri H. M. CHANNABASAPPA.**—There was a team appointed by the Government of India to study minor irrigation. It was headed by Sri N.V. Gadgil.

Sri ALUR HANUMANTHAPPA.—In view of the importance of minor tanks in Bangalore District, will the Government consider taking up of all the tanks in all the taluks?

Sri H. M. CHANNABASAPPA.—Desilting scheme is a scheme which is being examined and wherever it is found economical, Government will certainly take up those cases.

Formation of Village Communication Roads in Tiptur Taluk.

*Q.—69. **Sri K. P. REVANNASIDDAPPA** (Tiptur).—

Will the Government be pleased to state:—

(*a*) the number of applications received in Tiptur Taluk requesting for the formation of village communication roads;

(*b*) whether it has come to their notice that inconvenience is caused to the public and vehicular traffic near the approach road between Kottige Halli, Karadalu on Turuvekere Road which reaches Banasandra, Turuvekere Taluk *via* Eachanur, Karadalu, Kottigehalli due to formation of ditch as a result of the breach of a tank?

A.—**Sri T. SUBRAMANYA** (Minister for Law, Labour and Local Self-Government).—

(*a*) Ten.

(*b*) Yes.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—(ಎ) ಭಾಗಕ್ಕೆ ಉತ್ತರವಾಗಿ ತಿಳಿಸಿರುವ ಹತ್ತು ರಸ್ತೆಗಳು ಯಾವುವು ?

†ಶ್ರೀ ಟಿ. ಸುಬ್ರಹ್ಮಣ್ಯ.—ಆ ವಿವರಗಳು ನನ್ನ ಹತ್ತಿರವಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ವರ್ಷ ಯಾವ ಯಾವ ರಸ್ತೆಗಳನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಟಿ. ಸುಬ್ರಹ್ಮಣ್ಯ.—ನಾವು ತೆಗೆದುಕೊಳ್ಳುವುದಿಲ್ಲ ಜಿಲ್ಲಾ ಬೋರ್ಡ್‌ಗಳವರು ತೆಗೆದುಕೊಳ್ಳಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಜನ ಸಂಖ್ಯಾರಕ್ಕೆ ತೊಂದರೆಯಾಗಿದೆ ಎಂದು ಹೇಳಿದರೆ ಇತರರಿಗೆ ಕೊಟ್ಟ ಹಾಗೆ ಸರ್ಕಾರದಿಂದ ಸ್ಪೆಷಲ್ ಗ್ರಾಂಟ್ ಕೊಟ್ಟು, ಆ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ?

ಶ್ರೀ ಟಿ. ಸುಬ್ರಹ್ಮಣ್ಯ.—'ಇತರರಿಗೆ ಕೊಟ್ಟ ಹಾಗೆ' ಎಂಬುದು ನ್ಯಾಯ ಚೌಕಟ್ಟಿನಲ್ಲಿ ಇದ್ದ ಹಾಗೆ ಇದೆ. ಇತರರಿಗಿಂತಲೂ ಮಾನ್ಯ ಸದಸ್ಯರ ತಲ್ಲೂಕಿಗೇ ಜಾಸ್ತಿ ಕೊಟ್ಟಿದ್ದೇವೆ. ನಾನೂ ರೋಕೋಪ ಯೋಗಿ ಶಾಖೆಯ ಮಂತ್ರಿಗಳೂ ಹೋಗಿ ಮಾನ್ಯ ಸದಸ್ಯರು ಯಾವುದನ್ನು ಹೇಳುತ್ತಿದ್ದಾರೆಯೋ ಅದನ್ನು ನೋಡಿಕೊಂಡು ಬಂದು, ಆ ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ಹೇಳಿ ಬಂದಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇದರ ಹೈಕಿ ಸದರಿಘಟ್ಟ ಕೆರೆಗೋಡಿ ರಸ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳು ಆ ಭಾಗದಲ್ಲಿ ಸಂಚಾರ ಮಾಡಿದಾಗ ಕೇಳಿದ್ದೆವು. ಇದಕ್ಕೆ ಯಾವುದಾದರೂ ಸ್ಪೆಷಲ್ ಗ್ರಾಂಟನ್ನು ಕೊಡುತ್ತಾರೆಯೇ ?

ಶ್ರೀ ಟಿ. ಸುಬ್ರಹ್ಮಣ್ಯ.—ಈ ನಲ ಸ್ಪೆಷಲ್ ಗ್ರಾಂಟನ್ನು ಜಿಲ್ಲಾ ಬೋರ್ಡುಗಳಿಗೆ ಜನ ಸಂಖ್ಯೆಗನುಗುಣವಾಗಿ ಹಂಚಿದ್ದೇವೆ. ಈಗಾಗಲೇ ಸದರಿಘಟ್ಟ ರಸ್ತೆಯನ್ನು ತೆಗೆದುಕೊಳ್ಳದೆ ಇದ್ದರೆ ಅದನ್ನು ತೆಗೆದುಕೊಳ್ಳಬೇಕೆಂದು ಡೆಪ್ಯುಟಿ ಕಮಿಷನರಿಗೆ ನಾವು ಸೂಚನೆಯನ್ನು ಕೊಡುವುದಕ್ಕಾಗುವುದಿಲ್ಲ. ಈಗ ತೆಗೆದುಕೊಂಡಿರುವುದನ್ನು ಪೂರ್ತಿಮಾಡಬೇಕಾಗಿದೆ.

Repairs to the Temple at Vighnasanthe in Tiptur Taluk.

*Q.—74. **Sri K. P. REVANNASIDDAPPA** (Tiptur).—

Will the Government be pleased to state:—

(*a*) whether it has come to their notice that the temple at Vighnasanthe in Tiptur Taluk is in a dilapidated condition;

(*b*) whether it is a fact that the officers of the Public Works Department got some portions of the temple demolished and have not completed the work, thus allowing dust and water to fall on the image;

(*c*) whether any estimate has been prepared for this work;

(*d*) if so, with whom it is pending;

(*e*) when the estimate would be sanctioned and work completed?

A.—Sri H. M. CHANNABASAPPA (Minister for Public Works and Electricity).—

(*b*) Yes.

(*b*) No. The image has been got protected.

(*c*) Yes.

(*d*) Executive Engineer, Tumkur Division.

(*e*) Estimate is being sent to the Director of Archæology very shortly. Work will be taken up after getting the estimate countersigned by the Director of Archæology and receipt of allotment of funds for the same.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ದೇವಸ್ಥಾನವನ್ನು ಕೆಡವಿಸಿ ಎಷ್ಟು ವರ್ಷಗಳಾದುವು ?

†ಶ್ರೀ ಎಂ. ಎನ್. ನಾಗನೂರ್.—1955 ರಲ್ಲಿ† ಕೆಡವಿಸಲಾಯಿತು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇದುವರೆಗೂ ಹಾಗೆಯೇ ಬಿಟ್ಟಿದ್ದೀರಾ ?

ಶ್ರೀ ಎಂ. ಎನ್. ನಾಗನೂರ್.—ದೇವಸ್ಥಾನವನ್ನು ಕೆಡವಿದ್ದು ಬಿಂದರೆ ಪೂರ್ತಿಯಾಗಿ ಕೆಡವಿಲ್ಲ. ಅದನ್ನು ರಿಪೇರಿಮಾಡಬೇಕೆಂದು ಮುಂಭಾಗವನ್ನು ಮಾತ್ರ ಕೆಡವಿದ್ದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎಸ್ಟಿಮೇಟ್ ತಯಾರಾಗಿ 1955ರಲ್ಲಿ ಕೆಡವಿದ್ದ ಕಟ್ಟಡವನ್ನು ಯಾವಾಗ ರಿಪೇರಿಮಾಡಿಸುತ್ತೀರಿ ?

ಶ್ರೀ ಎಂ. ಎನ್. ನಾಗನೂರ್.—ಮೊದಲು 1,100 ರೂಪಾಯಿಗಳಿಗೆ ಅಂದಾಜು ತಯಾರಾಗಿತ್ತು. ಕೇಂದ್ರ ಸರ್ಕಾರದ Director of Archæology ಅವರು ಬಂದು ನೋಡಿದ ಮೇಲೆ ಅದಕ್ಕೆ ಮತ್ತೊಂದು ಅಂದಾಜನ್ನು ತಯಾರುಮಾಡಲು ಹೇಳಿದುದರಿಂದ 11 ಸಾವಿರ ರೂಪಾಯಿಗಳಿಗೆ ಅಂದಾಜನ್ನು ತಯಾರು ಮಾಡಲಾಗಿದೆ. ಅದನ್ನು ಕೇಂದ್ರ ಸರ್ಕಾರದ ಮಂಜೂರಾತಿಗೆ ಕಳಿಸಿಕೊಡಲಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ದೇವರ ಕೆಲಸ ಕ್ಕೋಸ್ಕರವೆಂದು ನಾಲ್ಕು ವರ್ಷಗಳಿಂದ ನಿಧಾನ ಮಾಡಿದ್ದೀರಾ ?

Mr. SPEAKER.—Order, order.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ದೇವಸ್ಥಾನದಲ್ಲಿರುವ ಕಲಾಚಿತ್ರಗಳು ಬಹಳ ಪುರಾತನವಾದುವು ಮತ್ತು ಅನೇಕ ದೇವಸ್ಥಾನಗಳಲ್ಲಿ ಇದೂ ಒಂದು ಮುಖ್ಯವಾದ ದೇವಸ್ಥಾನವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ಕಾರದ ದೃಷ್ಟಿಯಲ್ಲಿ ದೇವಸ್ಥಾನಗಳೆಲ್ಲವೂ ಮುಖ್ಯ. ರೋಕೋಪಯೋಗಿ ಶಾಖೆಗೆ ಹಣವನ್ನು ಕೊಟ್ಟರೆ ಮಾತ್ರ ಕೆಲಸ ನಡೆಯುತ್ತದೆ. ಪುನರ್ವಿಮರ್ಶಿತ ಅಂದಾಜು ಕೌಂಟರ್‌ಸೈನ್ ಆಗಿ ನಮಗೆ ಇನ್ನೂ ಬಂದಿಲ್ಲ. ಅದು ಬಂದ ಕೂಡಲೇ ಕೆಲಸ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಣವನ್ನು ಯಾರು ಕೊಡಬೇಕು ?

Sri H. M. CHANNABASAPPA.—Director of Archæology.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದನ್ನು ತರಿಸಿಕೊಳ್ಳುವುದು ಸರ್ಕಾರದ ಕರ್ತವ್ಯವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಸ್ಟಿಮೇಟ್ ತಯಾರುಮಾಡಿ ಕಳಿಸಿಕೊಟ್ಟಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಕೆಲಸವನ್ನು ಮಾಡಿಸಲು ಎಷ್ಟು ವರ್ಷಗಳು ಬೇಕು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇಗ ಮಾಡಿಸಿಕೊಡುತ್ತೇವೆ.

ಶ್ರೀ ಬಿ. ಕೆ. ನಾಗನೂರ್.—"ವಿಗ್ರಹಕ್ಕೆ ರಕ್ಷಣೆ ಇರುವಂತೆ ಮಾಡಿದೆ" ಎಂದು ಉತ್ತರಿಸಿದ್ದಾರೆ. ಪೋಲ್ಡ್‌ಸಿನವರನ್ನು ರಕ್ಷಣೆ ಕೆಲಸಕ್ಕೆ ಇಟ್ಟಿದ್ದಾರೆಯೇ ?

ಶ್ರೀ ಎಂ. ಎನ್. ನಾಗನೂರ್.—ನರಿಯಾದ ಕಲ್ಲುಗಳನ್ನು ಮೇಲೆ ಹಾಕಿ ನೀರು ಬೀಳದ ಹಾಗೆ ಮಾಡುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ದೇವರ ತಲೆಯ ಮೇಲೆ ಕಲ್ಲು ಹಾಕುತ್ತೀರಾ, ನ್ಯಾಯ ! ನಗು

(ಉತ್ತರವಿಲ್ಲ).

Conversion of Inter-District Roads into State Fund Roads in Tumkur District.

*Q.—130. Sri K. KENCHAPPA (Hiriyur).—

Will the Government be pleased to state :—

whether they propose to convert the following inter-district roads into State Fund Roads :

(i) Patrehalli—Dasudi road *via* Peelali in Tumkur district ;

(ii) Yalanadu road near Bhimanabande Doddahulikunte in Tumkur District ;

(iii) the road from Pitlali, Ikkanur to Hosur and Sira in Tumkur District ?

A.—Sri H. M. CHANNABASAPPA (Minister for Public Works and Electricity).—

These roads will be considered while examining proposals for the whole State for conversion of more roads into State Fund Roads.

ಶ್ರೀ ಕೆ. ಕೆಂಚಪ್ಪ.—ಮುಂದೆ ಪರಿಶೀಲಿಸಲಾಗುತ್ತದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಎಷ್ಟು ವರ್ಷಗಳಿಂದ ಇದನ್ನು ಪರೀಕ್ಷೆಮಾಡುತ್ತಿದ್ದಾರೆ ?

†Sri M. N. NAGHNOOR.—We have asked the Chief Engineer (General) to take up fresh roads to P.W.D. On receipt of his report they will be taken up.